ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ - 19

4ನೇ ವರ್ಷ 28ನೇ ಸಂಚಿಕೆ ; ಕೊಪ್ಪ 9-3-1986 ಭಾನುವಾರ ಬೆಲೆ 40 ಪೈಸೆ

ಲೋ॥ ಇಲಾಖೆ ಗ್ಯಾಂಗ್‌ಮೆನ್ ಧರಣಿ

ಕೊಪ್ಪ : ಇಲ್ಲಿನ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಗ್ಯಾಂಗ್‌ಮನ್‌ಗಳು ಮಾ. 10 ರಂದು ಕಚೇರಿಯೆದುರು 1 ದಿನದ ಧರಣಿ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದ್ದಾರೆ.

ಪ್ರತಿ ತಿಂಗಳು ಸಂಬಳ ಬಟವಾಡೆಯಲ್ಲಿ ತೀವ್ರ ವಿಳಂಬ; ಸರ್ಕಾರ 1982ರಲ್ಲೇ ಸಮವಸ್ತ್ರ ನೀಡಲು ತೀರ್ಮಾನಿಸಿದ್ದರೂ ಇನ್ನೂ ನೀಡದಿರುವುದು; ಕೆಲಸಗಾರರು ಸೇರಿ 3 ವರ್ಷವಾಗಿದ್ದರೂ ಅವರ ಹೆಸರನ್ನು ಸೇವಾ ಪುಸ್ತಕದಲ್ಲಿ ಇನ್ನೂ ನಮೂದಿಸದೆ ತುಂಬಲಾರದ ನಷ್ಟ ಉಂಟು ಮಾಡಿರುವುದು – ಇವುಗಳನ್ನು ಪ್ರತಿಭಟಿಸಿ ಈ ಧರಣಿ ನಡೆಯಲಿದೆಯೆಂದು ಕಾರ್ಮಿಕರ ಸಂಘದ ಕಾರ್ಯದರ್ಶಿ ಎನ್. ಆರ್. ರಾಮಚಂದ್ರ ತಿಳಿಸಿದ್ದಾರೆ.

ಗ್ರಾ. ಬ್ಯಾಂಕ್ ಡಿವಿಡೆಂಡ್ ಪಡೆಯಲು ಸೂಚನೆ

ಜಯಪುರ: ಕರಿಮನೆ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು 1982-83ನೆ ಸಾಲಿಗೆ ಶೇ. 9ರಂತೆ ಹಾಗೂ 1983-84ನೇ ಸಾಲಿಗೆ ಶೇ. 12ರಂತೆ ಷೇರುದಾರರಿಗೆ ಡಿವಿಡೆಂಡನ್ನು ಘೋಷಿಸಿದ್ದು, ಇದನ್ನು ತಾ: 1.3.86ರಿಂದ ಕೊಡಲಾಗುತ್ತಿದೆ. ಷೇರುದಾರ ರೈತ ಬಾಂಧವರು ಬ್ಯಾಂಕಿನ ವೇಳೆಯಲ್ಲಿ ಬಂದು ಪಡೆಯಬೇಕೆಂದು ಬ್ಯಾಂಕಿನ ಅಧ್ಯಕ್ಷ ಡಾ॥ ಯು.ಎಸ್. ಯೋಗಪ್ಪ ತಿಳಿಸಿದ್ದಾರೆ.

ಅರಣ್ಯ ಕಾವಲು ಸಿಬ್ಬಂದಿ ಮುಷ್ಕರದಂದು ರಾತ್ರಿ

ಹಾಲ್ಮುತ್ತೂರಿನಲ್ಲಿ ನಾಟ, ಗಾಡಿ ಸಹಿತ ಪುಢಾರಿ ಸೆರೆ, ಜುಲ್ಮಾನೆ; ಜಾಮೀನಿನ ಮೇಲೆ ಬಿಡುಗಡೆ

ಕೊಪ್ಪ : ಮಾರ್ಚ್ 6. ಅರಣ್ಯ ಕಾವಲು ಸಿಬ್ಬಂದಿಯ ರಾಜ್ಯಾದ್ಯಂತ ಮುಷ್ಕರ. ಮಾಮೂಲಿ ಕಾವಲು ಗಸ್ತಿಗೇ ಅಧಿಕಾರಿಗಳು ಮತ್ತು ಗುಮಾಸ್ತರ ಎರಡು-ಮೂರು ತಂಡ ನೇಮಿಸಬೇಕಾದ ತುರ್ತು. ಆಗ ಕಳ್ಳ ಸಾಗಣೆ ನಡೆದರೆ ಹೇಗೆ ಎದುರಿಸಬೇಕು? ಆದರೆ ಕಳ್ಳಸಾಗಣೆಯವರಿಗು ಇದೇ ತಾನೆ ಸುಸಂಧಿ!

ಬಲೆಗೆ ಬಿದ್ದ ಕುಳ

ಭಾರಿ ಪ್ರಮಾಣದ ಕಳ್ಳ ಸಾಗಣೆಯ ಖಚಿತ ಸುಳಿವು. ಒಂದೆರಡು ಜನ ಪೋಲೀಸರು ಮತ್ತು ಕಚೇರಿ ಸಿಬ್ಬಂದಿಯೊಂದಿಗೆ ಕಗ್ಗತ್ತಲ ರಾತ್ರಿ ಸ್ಥಳಕ್ಕೆ ಧಾವಿಸಿ ಅರಿಯದ ಕಾಡುದಾರಿಗಳಲ್ಲಿ ಅಡಗಿ ಕೂತ ಡಿ.ಎಫ್.ಓ. ನಿಸಯ್‌ಲೂಥ್ರರವರ ಬಲೆಗೆ ನಾಟ, ಗಾಡಿ, ಮತ್ತು 7 ಜನ ಸಂಗಡಿಗರ ಸಮೇತ ಬಿದ್ದವ ಖ್ಯಾತ ಮರಿ ರಾಜಕಾರಣಿ!

ಈ ಸಿನಿಮಾ ಮಾದರಿಯ ಸಾಹಸ ನಡೆದುದು ಹಾಲ್ಮುತ್ತೂರಿನ ಬಳಿಯ ಕಾಡಿನಲ್ಲಿ. ಎರಡು ಗಾಡಿಗಳಲ್ಲಿ ಹೇರಿದ್ದ ಸುಮಾರು ನಾಲ್ಕುವರೆ ಸಾವಿರ ರೂ. ಬೆಲೆ ಬಾಳಬಹುದಾದ ಒಟ್ಟು 35 ಘನ ಅಡಿ ಆಗುವ 2 ದೊಡ್ಡ ಹಲಸಿನ ತುಂಡುಗಳ ಸಮೇತ ಸಿಕ್ಕಿಬಿದ್ದವರು ಜನತಾ ಪಕ್ಷದ ಹೆಚ್. ಡಿ. ಶ್ರೀನಿವಾಸ್. ಉತ್ತಮ ರೀತಿಯ ಈ 2 ಗಾಡಿಗಳ ಬೆಲೆ ಎಳೆಂಟು ಸಾವಿರ ರೂ.

ಶಿವಮೊಗ್ಗದ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ, ಕೊಪ್ಪ ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕುಗಳ ನಿರ್ದೇಶಕರೂ, ಹಾಲ್ಮುತ್ತೂರು ಸಹಕಾರ ಸಂಘದ ಅಧ್ಯಕ್ಷರೂ ಆಗಿದ್ದಾರೆ ಶ್ರೀನಿವಾಸ್.

ಸೆರೆ ಸಿಕ್ಕವರು

ಸೆರೆಸಿಕ್ಕ ಶ್ರೀನಿವಾಸ್ ಸಹಚರರು ಇವರು: ಹೆಚ್. ಡಿ. ಪುಟ್ಟಪ್ಪ, ಕೆ. ಓಬೇಗೌಡ, ಕೆ.ಸಿ. ಚಂದ್ರಪ್ಪಗೌಡ, ಎಂ.ಕೆ. ಕೃಷ್ಣಪ್ಪ, ಹೆಚ್. ಚಂದ್ರಪ್ಪ (ದರ್ಜಿ) ಮತ್ತು ಗಾಡಿಗಳ ಒಡೆಯರಾದ ಕೆ.ಟಿ. ರಾಮಪ್ಪ ಮತ್ತು ಕೆ. ಎಸ್. ಹಿರಿಯಣ್ಣ.

ಜುಲ್ಮಾನೆ

ನಾಟ ಮತ್ತು ಗಾಡಿಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು ಬಾಂಡ್ ಬರೆಸಿಕೊಂಡು ಎತ್ತುಗಳನ್ನು ಬಿಡಲಾಗಿದೆ. ಶ್ರೀನಿವಾಸ್‌ಗೆ ಅರಣ್ಯ ಕಳ್ಳಸಾಗಣೆಯಲ್ಲಿ ಡಿ.ಎಫ್.ಓ. ವಿಧಿಸಬಹುದಾದ ಗರಿಷ್ಠ 5 ಸಾವಿರ ರೂ. ಜುಲ್ಮಾನೆಯ ಬಾಬ್ತು ಕೇವಣಿ ಕಟ್ಟಿಸಿಕೊಂಡು ಜಾಮೀನಿನ ಮೇಲೆ ಬಿಡಲಾಗಿದೆ.

ತೇಗದ ದಿಮ್ಮಿ ಸಹಿತ ಲಾರಿ ವಶ, ಕಳ್ಳರ ಬಂಧನ

ಇದೇ ಸುವರ್ಣ ಸಂಧಿಯನ್ನು ಉಪಯೋಗಿಸಿಕೊಂಡು, ಬಾಳೆಹೊನ್ನೂರು ವಲಯದ ಮಾಗುಂಡಿಯ ಬಳಿ ಇಲಾಖೆ ಕಡಿದಿಟ್ಟಿದ್ದ ಸಾಗುವಾನಿ ದಿಮ್ಮಿಗಳನ್ನು ಕದ್ದು ಸಾಗಿಸಲು ಯತ್ನಿಸಿದ ತಂಡವೊಂದರ ಇಬ್ಬರನ್ನು ಕೊಪ್ಪ, ಎ. ಸಿ. ಎಫ್. ರವರಾದ ಎ.ಬಿ. ಅಪ್ಪಣ್ಣ ಮತ್ತು ಬಾಳೆಹೊನ್ನೂರು ವಲಯಾಧಿಕಾರಿ ರುದ್ರಯ್ಯ ಅವರುಗಳು ಬಂಧಿಸಿ, ಸುಮಾರು 10 ಸಾವಿರ ರೂ. ಬೆಲೆಯ 9 ದಿಮ್ಮಿಗಳನ್ನು ತುಂಬಿದ್ದ ಲಾರಿಯನ್ನು ವಶಪಡಿಸಿಕೊಂಡಿದ್ದಾರೆ. ತಂಡದ ಇತರ ನಾಲ್ವರಿಗಾಗಿ ಹುಡುಕಲಾಗುತ್ತಿದೆ.

ಬೆಂಗಳೂರಿಗೆ ಸಾಗಿಸಿದ್ದ ನಾಟ ಪೋಲಿಸರಿಂದ ವಶ

ಬಾಳೆಹೊನ್ನೂರಿನ ಸರ್ಕಾರಿ ಅರಣ್ಯದಿಂದ ಕೆಲ ದಿನಗಳ ಹಿಂದೆ ಕಳ್ಳಸಾಗಣೆ ಮಾಡಲಾಗಿದ್ದ ಸುಮಾರು 40 ಸಾವಿರ ರೂ. ಬೆಲೆಯ ಸಾಗುವಾನಿ ಮತ್ತು 10 ಸಾವಿರ ರೂ. ಬೆಲೆಯ ಹೊನ್ನೆ ನಾಟವನ್ನು ಈಚೆಗೆ ಬೆಂಗಳೂರಿನ ಸಾಮಿಲ್‌ಒಂದರಿಂದ ಕೊಪ್ಪ ಸರ್ಕಲ್ ಇನ್‌ಸ್ಪೆಕ್ಟರ್ ಯು ವಿ. ಮುಂಡಲ್ಕರ್ ಅವರು ರೇಂಜರ್ ರುದ್ರಯ್ಯ ಮತ್ತು ಶೆಟ್ಟಿ ಅವರುಗಳ ನೆರವಿನೊಂದಿಗೆ ವಶಪಡಿಸಿಕೊಂಡು ಫೆಲಿಕ್ಸ್ ಎಂಬಾತನನ್ನು ಬಂಧಿಸಿದ್ದಾರೆ. ಪೋಲೀಸ್ ಸಿಬ್ಬಂದಿಗಳಾದ ತುಕ್ರಪ್ಪ, ಮುಂಜೇಗೌಡ, ಕೃಷ್ಣಮೂರ್ತಿ ಮತ್ತು ಸಂಜುಂಡಪ್ಪ ಅವರೂ ಈ ತಂಡದಲ್ಲಿದ್ದರು.

ಅಸ್ತಮಾ ರೋಗದ ಚಿಕಿತ್ಸಾ ಶಿಬಿರ

ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾ॥ ಕಾಸರಕೋಡಿನ (ಪಿನ್: 581 342) ವಿವೇಕಾನಂದ ಆರೋಗ್ಯಧಾಮದಲ್ಲಿ, ಅಸ್ತಮಾ, ಉಬ್ಬಸನೊದಲಾದ ಶ್ವಾಸೋಚ್ಛ್ವಾಸ ತೊಂದರೆಯಿಂದ ನರಳುತ್ತಿರುವವರಿಗಾಗಿ ಮಾ. 15ರಿಂದ ಒಂದು ತಿಂಗಳ ಚಿಕಿತ್ಸಾ ಶಿಬಿರ ನಡೆಯಲಿದೆ. ಯೋಗ ಮತ್ತು ನಿಸರ್ಗ ಚಿಕಿತ್ಸಾ ಪದ್ಧತಿಯಿಂದ ಚಿಕಿತ್ಸೆ ನಡೆಯುತ್ತದೆ. (ಆರೋಗ್ಯಧಾಮದ ಪೂರ್ಣ ವಿಳಾಸ ಪುಟ 2ರಲ್ಲಿದೆ. ಫೋನ್ ನಂ.: ಹೊನ್ನಾವರ 132.)

ಸಂತಾನ ಹರಣ ಶಸ್ತ್ರ ಚಿಕಿತ್ಸಾ ಶಿಬಿರ

ಕೊಪ್ಪ : ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ 27.3.86ರಂದು ಸಮುದಾಯ ಆರೋಗ್ಯ ಕಾರ್ಯಕರ್ತರ ನೆರವಿನೊಂದಿಗೆ ಉದರ ದರ್ಶಕ ಸಂತಾನ ಹರಣ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಏರ್ಪಡಿಸಲಾಗಿದೆ.

ಅಂಚೆ ನೌಕರರ ಅಧಿವೇಶನ

ಕೊಪ್ಪ: ಅಂಚೆ ಇಲಾಖೆಯ 3ನೇ ದರ್ಜೆ, ಪೋಸ್ಟ್‌ಮನ್, ಗ್ರೂಪ್ 'ಡಿ' ಮತ್ತು ಇಲಾಖೇತರ ನೌಕರರ ಸಂಘದ (ಎನ್.ಎಫ್.ಪಿ.ಟಿ.ಇ.) ಕೊಪ್ಪ ಶಾಖೆಯ ಜಂಟಿ ಅಧಿವೇಶನ ಇಲ್ಲಿ ಮಾ.16ರಂದು ನಡೆಯಲಿದೆ.

ಪೌರ ಸೇವಾ ನೌಕರರ ಅನಿರ್ದಿಷ್ಟ ಕಾಲದ ಮುಷ್ಕರ

ಕೊಪ್ಪ : ಬಳ್ಳಾರಿಯಲ್ಲಿ ಕೇಂದ್ರ ಕಚೇರಿ ಹೊಂದಿರುವ ರಾಜ್ಯ ಪೌರ ಸೇವಾ ನೌಕರರ ಸಂಘದ ಕರೆಯಂತೆ ಇಲ್ಲಿನ ಪುರಸಭೆಯ ಎಲ್ಲಾ ನೌಕರರೂ ಮಾ. 6ರಿಂದ ತಮ್ಮ ಬೇಡಿಕೆಗಳು ಈಡೇರುವವರೆಗೂ ಅನಿರ್ದಿಷ್ಟ ಕಾಲದ ಮುಷ್ಕರ ಹೂಡಿದ್ದಾರೆ.

ಮೇಗುಂದ ಹೋಬಳಿಯಲ್ಲಿ "ದರೋಡೆಕೋರರ" ಭೀತಿ

ಜಯಪುರ : ಇತ್ತೀಚೆಗೆ ಶೃಂಗೇರಿ ಸುತ್ತಮುತ್ತ ಹಬ್ಬಿದ್ದ ದರೋಡೆಕೋರರ ಭೀತಿ ಈಗ ಮೇಗುಂದಾ ಹೋಬಳಿಯಾದ್ಯಂತ ಹಬ್ಬಿರುವುದು ಕಂಡುಬರುತ್ತಿದೆ.

ಈಚೆಗೆ ಕೊಟ್ಟಿಗೆಹಾರದ ಬಳಿ ಸೆರೆಸಿಕ್ಕ ಕುಖ್ಯಾತ ಡಕಾಯಿತ ಸುರೇಂದ್ರ ಯಾನೆ ಚಂದ್ರನ್‌ನ ಸಹಚರರೆನ್ನಲಾದ ಇಬ್ಬರನ್ನು ಬಸರಿಕಟ್ಟೆಯ ಬಳಿಯ ಕವನಹಳ್ಳದಲ್ಲಿ ಪೋಲೀಸರು ಕಳೆದವಾರ ಬಂಧಿಸಿದ ಹಿನ್ನೆಲೆಯಲ್ಲಿ ಜಯಪುರದಿಂದ ಬಸರೀಕಟ್ಟೆಯವರೆಗಿನ ಹಳ್ಳಿಗಾಡಿನಾದ್ಯಂತ ಈ ಭೀತಿ ಆವರಿಸಿದೆ. (ಸದರಿ ಸಹಚರರಿಗೆ ಕವನಹಳ್ಳದ ಬಳಿ ವಾಸವಿರುವ 'ಯಾನೆ-ಯಾನೆ'ಗಳ ಹೆಸರುಳ್ಳ ಜನತಾ ಕಾರ್ಯಕರ್ತನೊಬ್ಬ ಆಶ್ರಯ ನೀಡುತ್ತಿದ್ದನೆಂದು ಗ್ರಾಮೀಣ ವದಂತಿ. ಆದರೆ ಇವರನ್ನು ಕಾಡಿನಲ್ಲಿ ಬಂಧಿಸಿದ್ದಾಗಿ ಪೋಲಿಸರ ವರದಿ.)

ಬಂಧನ

ಬಾಳೆಹೊನ್ನೂರು: ಇಲ್ಲಿನ ಪೋಲೀಸರು ಮೇಲ್ಪಾಲಿನ ಯಶೋಧರ ಭಂಡಾರಿ ಎಂಬಾತನನ್ನು ಅಪರಾಧ ಸಂಖ್ಯೆ 11/86ರ ಸಂಬಂಧದಲ್ಲಿ ಫೆ. 26ರಂದು ಬಂಧಿಸಿರುವುದಾಗಿ ತಿಳಿದು ಬಂದಿದೆ.

ಕೊಪ್ಪ ತಾ॥: 'ತಾಳಿಭಾಗ್ಯ'ಕ್ಕೆ ಅರ್ಜಿ ಆಹ್ವಾನ

ತಾಳಿಭಾಗ್ಯ ಯೋಜನೆ ಅನ್ವಯ ಕೊಪ್ಪ ತಾಲ್ಲೂಕಿನಲ್ಲಿ ಸಾಮೂಹಿಕ ವಿವಾಹವನ್ನು ದಿನಾಂಕ 23-3-86ರಂದು 11 ಘಂಟೆಗೆ ಕೊಪ್ಪದ ಶಂಕರ್ ಸಂಸ್ಥಾನ ಆವರಣದಲ್ಲಿ ಲಯನ್ಸ್ ಕ್ಲಬ್ ಸಹಯೋಗದೊಂದಿಗೆ ಏರ್ಪಡಿಸಲಾಗಿದೆ.

ಸೂಚನೆ

1. ವಧೂವರರು ಅಥವಾ ಅವರ ಕುಟುಂಬದವರ, ಯಾರಾದರೊಬ್ಬರು ಹಸಿರು ಕಾರ್ಡು ಹೊಂದಿರಬೇಕು.
2. ವಧೂವರರಿಗೆ ತಾಳಿ ಮತ್ತು ಬಟ್ಟೆಗಳನ್ನು ಉಚಿತವಾಗಿ ನೀಡಲಾಗುವುದು
3. ಈ ಯೋಜನೆ ಅನ್ವಯ ಸರ್ಕಾರದಿಂದ ಸಹಾಯ ಪಡೆಯಲು ಇಚ್ಛಿಸುವವರು ದಿನಾಂಕ 15-3-86ರೊಳಗಾಗಿ ಕೊಪ್ಪ ತಾಲ್ಲೂಕು ತಹಸೀಲ್ದಾರ್‌ರವರಿಗೆ ಅಥವಾ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಅಥವಾ ಸಂಬಂಧಪಟ್ಟ ಹೋಬಳಿ ರೆವಿನ್ಯೂ ಇನ್‌ಸ್ಪೆಕ್ಟರ್‌ರಿಗೆ ಅಥವಾ ಲಯನ್ಸ್ ಕ್ಲಬ್ ಕಾರ್ಯದರ್ಶಿಗಳಾದ ಜನಾನಾಧಿಕಾರಿ ವಾಮಣ್ಣ ನವರಿಗೆ ಅರ್ಜಿ ಸಲ್ಲಿಸಿ ನೊಂದಾಯಿಸತಕ್ಕದ್ದು. ಪ್ರತಿಯೊಂದು ಕಲ್ಯಾಣ ಮದುವೆ ವಧೂವರರನ್ನು ಸೇರಿ ಒಟ್ಟು 10 ಜನರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ.

ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್ :
ಮಂಗಳೂರು - 575003
ಶಾಖೆ: ಕುದುರೆಗುಂಡಿ

ತಾ: 9.3.86.

ಹರಾಜು ನೋಟೀಸು

ಈ ಕೆಳಗಿನ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವಾಯಿದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಿದ್ದಂತೆ ಕೆಲವರಿಗೆ ಕಳುಹಿಸಿದ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಸದ್ರಿಯವರಿಗೆ ವ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬ್ಯಾಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಾರೀಕು 07–04–1986ರ ಒಳಗೆ ಬ್ಯಾಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ತಾ|| 8.4.1986ರ ಅಪರಾಹ್ನ ಗಂಟೆ 4ಕ್ಕೆ ಸರಿಯಾಗಿ ಬ್ಯಾಂಕಿನ ವಠಾರದಲ್ಲಿ ಬಹಿರಂಗ ಯಾ ಖಾಸಗಿಯಾಗಿ ಹರಾಜು ಮಾಡಲಾದೀತು. ಈ ಸಂಬಂಧ ಬ್ಯಾಂಕಿಗೆ ಉಂಟಾಗಬಹುದಾದ ಸಕಲ ಖರ್ಚು ವ ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬುದಾರರಾಗಿರುತ್ತಾರೆ. ತಿಳಿದಿರಲಿ

ಸಾಲದ ನಂಬರು	ಸಾಲಗಾರರ ಹೆಸರು ಮತ್ತು ವಿಳಾಸ	ಮೊಬಲಗು
1. 59/82	ಶ್ರೀ ಸಿ.ಜಿ. ಲಕ್ಷ್ಮಣ S/O ದಿ|| ಗಣಪತಿ ಶೇಟ್. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನರಸಿಂಹರಾಜಪುರ	1198–60
2. 121/82	ಶ್ರೀ ಶೇಖರ S/O ಬಸವ ಕುದುರೆಗುಂಡಿ	67–10
3. 17/83	ಶ್ರೀ ಮಂಜ ಆಚಾರಿ S/O ಗೋಪಾಲ ಆಚಾರಿ ಜನತಾ ಕೋಲನಿ, ಕುದ್ರೆಗುಂಡಿ	718–80
4. 54/83	ಶ್ರೀ ಎಚ್. ಬಿ. ನಟೇಶ್ S/O ಎಚ್. ಬೋಗೇಶ ಶೆಟ್ಟಿ, ಚಿಲ್ಲರೆ ವ್ಯಾಪಾರಿ, ನರಸಿಂಹರಾಜಪುರ	2955–00
5. 67/83	ಶ್ರೀ ಕೆ.ಎಸ್. ಬಾಬಯ್ಯಗೌಡ S/O ಸುಬ್ಬೇಗೌಡ, ಕಟ್ಟಿನಮನೆ	529–80
6. 111/83	ಶ್ರೀ ಸಿ. ಶೇಷಪ್ಪ S/O ಸಿದ್ದಣ್ಣ, ಗೌರಿಹಳ್ಳ, ಕುದ್ರೆಗುಂಡಿ.	300–00
7. 122/83	ಕೆ. ಎಸ್. ಬಾಬಯ್ಯ ಗೌಡ S/O ಸುಬ್ಬೇಗೌಡ, ಕಟ್ಟಿನಮನೆ	1052–65
8. 191/83	ಶ್ರೀ ಪುರುಷೋತ್ತಮ, S/O ಕಲ್ಯಾಣಪ್ಪ, ಮಂತ್ರಮಠ, ಸೀತೂರು.	100–00
9. 206/83	ಶ್ರೀ ಕೆ.ಕೆ.ರಾಮಣ್ಣ ಕುಟ್ಟಿ. s/o ಕೆ.ವಿ.ಕುಟ್ಟನ್ ಕೃಷಿಕ ಯಲಗುಡಿಗೆ ಕಾನೂರು ಪೋಸ್ಟ್.	892–35
10. 210/83	ಶ್ರೀ ಕೆ.ಪುರುಷೋತ್ತಮ,s/o ಕಲ್ಯಾಣಪ್ಪ, ಮಂತ್ರಮಠ ಸೀತೂರು.	66–75
11. 211/83	ಶ್ರೀ ಗೋವಿಂದ s/o ವೇಲಾಯುಧನ್ ಕೆರೆಮನೆ–ಕಾನೂರು	320–75
12. 212/83	ಶ್ರೀ ಎಸ್.ಎಮ್.ಪ್ರಸನ್ನ ಕುಮಾರ್ s/o ಮಂಜಯ್ಯ ಗೌಡ, ಶೆಟ್ಟಿಕೊಪ್ಪ.	1478–65
13. 216/83	ಶ್ರೀ ಹೆಚ್.ಸಿ.ಶಂಕ್ರಪ್ಪ s/o ಚಿನ್ನೇ ಗೌಡ ಜ್ಯೋತಿ ಸ್ಟೋರ್ಸ್ ಕೆರೆಮನೆ–ಕಾನೂರು	723–50
14. 218/83	ಶ್ರೀ ಕೆ.ಎ.ಅಬೂಬಕ್ಕರ್ s/o ಕೆ.ಎ.ರಹಿಮಾನ್, ಕುದ್ರೆಗುಂಡಿ	1835–40
15. 222/83	ಶ್ರೀ ಬಿ.ಯಂ.ಉಗ್ಗಪ್ಪ s/o ಮಂಜಪ್ಪ ಗೌಡ ವಗ್ಗಡೆ ಗ್ರಾಮ ಕಾನೂರು	1629–95
16. 251/83	ಶ್ರೀ ಬಿ.ಕೆ.ಜಯರಾಜ್ s/o ಬಿ ಕಾಂತರಾಜ್, ಕುದುರೆಗುಂಡಿ	1774–65
17. 258/83	ಶ್ರೀ ಬಿ.ಕುಮಾರ್ s/o ಕರುಣಾಕರನ್ ಉಮಾದೇವಿ ಕ್ಲೋತ್ ಸ್ಟೋರ್ಸ್	3147–20
18. 265/83	ಶ್ರೀ ತಬರ s/o ಕೂಕ್ರ ಗುಡ್ಡೆಹಳ್ಳ ಕುದುರೆಗುಂಡಿ	229–30
19. 273/83	ಶ್ರೀ ಎನ್. ಟಿ.ಚಂದ್ರಶೇಖರ s/o ತಮ್ಮನ್ನಾಯ್ಕ. ನಿಲುವಾಗಿಲು ಅಂಚೆ, ಕೊಪ್ಪ ತಾಲೂಕು	2315–55
20. 286/83	ಶ್ರೀಕೆ.ಎನ್ ಬೋಬಯ್ಯ ಗೌಡ s/o ಸುಬ್ಬೇಗೌಡ ಕಟ್ಟಿನ ಮನೆ.	424–95
21. 310/83	ಶ್ರೀ ಕೆ.ಎ.ಅಬೂಬಕರ್ s/o ಕೆ.ಎ.ರಹಮಾನ್ ಕುದುರೆಗುಂಡಿ	1636–05
22. 313/83	ಶ್ರೀಕೆ.ಪಿ.ಜಯರಾಂ s/o ಪುಟ್ಟೇಗೌಡ ಕಾರ್‌ಬೈಲು, ಬೆಳ್ಳೂರು	510–10
23. 314/83	ಶ್ರೀ ಪಿ ವಿ. ರಾಮಕೃಷ್ಣ s/o ವೇಲು ಪ್ರಕಾಶ ಹೋಟೆಲು ನರಸಿಂಹರಾಜಪುರ.	1790–75
24. 342/83	ಶ್ರೀ ಶಂಕರಪ್ಪ s/o ಚಿನ್ನೇಗೌಡ ಕೆರೆಮನೆ ಕಾನೂರು	1291–40
25. 360/83	ಶ್ರೀ ಸೈಯದ್ ಇಕ್ಬಾಲ್ s/o ಕರೀಮ್ ಸಾಬ್ ಬಿ.ಸಿ.ಯಸ್. ಸೈಕಲ್ ಶೋಪ್ ನರಸಿಂಹರಾಜಪುರ.	3283–70
26. 5/84	ಶ್ರೀ ಯು ಎ.ಮೋಹನ s/o ಯು ಅಣ್ಣಾ ರಾವ್ ಗ್ರಾಮಲೆಕ್ಕಿಗ–ತಲಮಕ್ಕಿ ಪಂಚಾಯತ್ ಕುದುರೆಗುಂಡಿ	3377–80
27. 12/84	ಶ್ರೀ ಗೋಪಾಲಕೃಷ್ಣ s/o ಮುಕುಂದ ನಾಯಕ್ ಹೋಟೆಲ್ ಕೀಪರ್, ಕುದುರೆಗುಂಡಿ	353–55
28. 28/84	ಶ್ರೀಮತಿ ಶಾರದಮ್ಮ d/o ಸೂರಪ್ಪ, ಎಲ್.ಹೆಚ್.ವಿ.ಕೊಪ್ಪ	1005–00

ಮ್ಯಾನೇಜರ್.

ಕಾವಡಿ-ಶಾನುವಳ್ಳಿ ಮಧ್ಯೆ ಬಸ್ ಓಡಾಟಕ್ಕೆ ಪರ್ಮಿಟ್ ಆಗಿದೆಯೆ ?

ಕೊಪ್ಪ: ಈ ತಾಲ್ಲೂಕಿನ, ಕೊಪ್ಪ–ಆಗುಂಬೆ ರಸ್ತೆಯಲ್ಲಿರುವ ಶಾನುವಳ್ಳಿ ಮತ್ತು ಶೃಂಗೇರಿ ತಾಲ್ಲೂಕಿನ, ಕೊಪ್ಪ–ಶೃಂಗೇರಿ ರಸ್ತೆಯಲ್ಲಿರುವ ಕಾವಡಿ— ಈ ಎರಡು ಊರುಗಳ ಮಧ್ಯೆ ಬೇಗಾನೆ, ಬಿಲಗದ್ದೆ ಮುಂತಾದ ಹತ್ತಾರು ಹಳ್ಳಿಗಳ ಮೂಲಕ ಹಾಯುವ ಅತ್ಯುಪಯುಕ್ತವಾದ ಗ್ರಾಮಾಂತರ ಲೋಕೋಪಯೋಗಿ ರಸ್ತೆಯೊಂದು ಸಂಪೂರ್ಣ ನಿರ್ಮಾಣಗೊಂಡು ಆ ಮಾರ್ಗವಾಗಿ ಬಸ್ ಓಡಿಸಬೇಕೆಂದು ಸ್ಥಳೀಯ ಗ್ರಾಮಸ್ಥರು ಒತ್ತಾಯಿಸತೊಡಗಿ ಈಗಾಗಲೇ ಎರಡು ವರ್ಷವಾಗಿದೆ. "ಆ ಕಂಪ್ನಿಯವರು ಓಡಿಸ್ತಾರಂತೆ", "ಈ ಕಂಪ್ನಿಯವರಿಗೆ ಪರ್ಮಿಟ್ ಆಗಿದೆಯಂತೆ" ಎಂಬಂಥ 'ಸುದ್ದಿ'ಗಳು ಈ ಎರಡು ವರ್ಷಗಳಲ್ಲಿ ಹಲವು ಬಾರಿ ಹುಟ್ಟಿ ಅಡಗಿವೆ.

ಈಗ ಶಂಕರ್ ಸಾರಿಗೆ ಸಂಸ್ಥೆಯವರಿಗೆ ಕೆರೆಕಟ್ಟೆಯಿಂದ ಬೆಳಿಗ್ಗೆ ಸುಮಾರು 7 ಗಂಟೆಗೆ ಹೊರಟು ಶೃಂಗೇರಿ, ಕಾವಡಿ, ಶಾನುವಳ್ಳಿ, ಕೊಪ್ಪ ಮಾರ್ಗವಾಗಿ ತೀರ್ಥಹಳ್ಳಿವರೆಗೆ ಬಸ್ ಓಡಿಸಲು ಬಸ್ ನಂಬರ್ ನಮೂದಿಸಿ ಒಂದು ರಹದಾರಿ ಸಿಕ್ಕಿರುವ ಸುದ್ದಿ ಹಬ್ಬಿದೆಯಂತೆ. 'ಸ್ಥಳೀಯ ಗ್ರಾಮಸ್ಥರ ಒತ್ತಾಯದ ಮೇರೆಗೆ' ಕಾವಳಿ ಲಕ್ಷ್ಮೀನಾರಾಯಣಪ್ಪ ಅವರು, ಈ ಸುದ್ದಿ ನಿಜವೇ? ಎಂಬುದಾಗಿ ತಿಳಿಯಲು ಅಪೇಕ್ಷಿಸಿದ್ದಾರೆ.

ಈ ಬಗ್ಗೆ ನಾವು ಶಂಕರ್ ಕಂಪೆನಿಯವರಿಗೆ ಫೆ. 25ರಂದು ಬರೆದು ತಲುಪಿಸಿರುವ ಪತ್ರಕ್ಕೆ ಇನ್ನೂ ಉತ್ತರ ಬಂದಿಲ್ಲ.

"ನಾವು ಇನ್ನು ಕೆಲವು ದಿನ ನೋಡಿ ಈ ವಿಚಾರವನ್ನು ರಾಜ್ಯ ಸಾರಿಗೆ ಮಂತ್ರಿಗಳಿಗೆ ಮನವರಿಕೆ ಮಾಡಿ ಕೊಡಲಿದ್ದೇವೆ" ಎಂದು ಲಕ್ಷ್ಮೀನಾರಾಯಣಪ್ಪ ಬರೆದಿದ್ದಾರೆ.

ಎಂ.ಎಲ್. ರಾಮಚಂದ್ರರಾವ್

(ಎರಡನೇ ಪುಟದಿಂದ)

ಬಾರಿ ಸನ್ಮಾನಿಸಲ್ಪಟ್ಟಿದ್ದಾರೆ.

ಉನ್ನತ ಶಿಕ್ಷಣ, ಉತ್ತಮ ಅವಕಾಶಗಳು ಇಲ್ಲದೆಯೂ ಸ್ವಯಂ ಪ್ರತಿಭೆಯಿಂದಲೇ ಕಲೆಯ ಸಾಧನೆ ಮಾಡಿದ ರಾಮಚಂದ್ರರಾವ್ ಎಲೆ ಮರೆಯ ಕಾಯಿಯಂತೆ ಹರಕೆತ್ರಿಕ ಸಮೀಪ ಕೃಷಿಯಿಂದ ಜೀವನ ನಡೆಸುತ್ತಿದ್ದಾರೆ.

ಓದುಗರ ಪತ್ರಗಳು

ಅಧ್ಯಾಪಕ-ಪತ್ರಕರ್ತ: ಸಮಾನ ಮನೋಭಾವ

ಪ್ರಿಯ ಶ್ರೀ ನಾಗರಾಜ್,

ಉಪಾಧ್ಯಾಯ ಮತ್ತು ಪತ್ರಕರ್ತ ಒಂದು ದೃಷ್ಟಿಯಿಂದ ಏಕ ಮನೋಭಾವ ಉಳ್ಳವರು. ಉಪಾಧ್ಯಾಯ ವಿದ್ಯಾರ್ಥಿಯನ್ನು ಎಂದೂ ದ್ವೇಷಿಸುವುದಿಲ್ಲ. ಆದರೆ ಅವನಲ್ಲಿರುವ ಅವಗುಣಗಳನ್ನು ತಿದ್ದುವ ಸಲುವಾಗಿ ಅವನನ್ನು ಕಟು ಮಾತಿನಿಂದ, ಕೆಲವೊಮ್ಮೆ ಹೊಡೆದೂ ಶಿಕ್ಷಿಸುತ್ತಾನೆ. ಶಿಕ್ಷೆಗೆ ಒಳಗಾದ ವಿದ್ಯಾರ್ಥಿ ಮುಂದೆ ತಿಳುವಳಿಕಸ್ಥನಾದಾಗ ತನ್ನನ್ನು ಶಿಕ್ಷಿಸಿದ ಗುರುವನ್ನು ಹೃತ್ಪೂರ್ವಕವಾಗಿ ಪ್ರೀತಿಸುತ್ತಾನೆ.

ಪತ್ರಕರ್ತನಾದರೋ ಸಮಾಜದ ಗುರುವಿದ್ದಂತೆ. ನಾಗರಿಕರ ಹಿತ ರಕ್ಷಣೆಗಾಗಿ ಪತ್ರಕರ್ತ ದುಡಿಯುತ್ತಿರುತ್ತಾನೆ. ದೇಶದ ಕಾನೂನಿನ ಉಲ್ಲಂಘನೆ ಮಾಡುವ, ಸಮಾಜದ ನೆಮ್ಮದಿ ಕೆಡಿಸುವ ಜನಗಳ ವಕ್ರ ಬುದ್ಧಿಯನ್ನು ಅವನು ತಿದ್ದುವ ಸಲುವಾಗಿ ಟೀಕಿಸಬೇಕಾಗುತ್ತದೆಯೇ ವಿನಃ ವೈಯಕ್ತಿಕ ದ್ವೇಷ ಖಂಡಿತಾ ಇರುವುದಿಲ್ಲ ಮತ್ತು ಇರಲೂಬಾರದು.

ನಿಮ್ಮ ಮೇಲೆ ಇತ್ತೀಚಿಗೆ ಕೊಪ್ಪದಲ್ಲಿ ನಡೆದ ಹಲ್ಲೆ—ಹಲ್ಲೆ ಮಾಡಿದವರೇ ಪ್ರಶಾಂತ ಚಿತ್ತದಿಂದ ತಮ್ಮ ನಡವಳಿಕೆಯನ್ನು ಪರಿಶೀಲಿಸಿಕೊಳ್ಳುವುದು ಸಮಾಜದ ಆರೋಗ್ಯದ ದೃಷ್ಟಿಯಿಂದ ಅತ್ಯಗತ್ಯ.

ಪತ್ರಿಕೆಗೂ ನಿಮಗೂ ಸಮಾಜ ರಕ್ಷಣೆ ನೀಡಲೇಬೇಕಾಗುತ್ತದೆ.

ಕೆ.ಜಿ.ಎಸ್.ಶಾಸ್ತ್ರಿ
ಅಧ್ಯಾಪಕ, ಹರಿಹರಪುರ.

ಹಲ್ಲೆ ಯಾವುದೇ ಸಮಾಜಕ್ಕೆ ಶೋಭೆ ತರುವಂಥದಲ್ಲ

ಮಾನ್ಯರೆ,

ತಾ|| 20.2.86ರಂದು ನಿಮ್ಮ ಮೇಲೆ ಹಲ್ಲೆ ನಡೆಯಿತೆಂದು ಕೇಳಿ ವಿಷಾದವಾಯಿತು. ನಿಷ್ಪಕ್ಷಪಾತವಾಗಿ ಬರೆಯುವ ಒಬ್ಬ ಪತ್ರಕರ್ತರ ಮೇಲೆ ಹಲ್ಲೆ ನಡೆಸುವುದು ಕಡಿಮೆ ತಿಳುವಳಿಕೆಯುವರ ವರ್ತನೆ. ಇದು ಯಾವುದೇ ಸಮಾಜಕ್ಕೆ ಶೋಭೆ ತರುವ ವಿಚಾರವಲ್ಲ. ಸಜ್ಜನಿಕೆಗೆ ಹೆಸರಾದ ಕೊಪ್ಪದ ಜನತೆ ಇಂತಹ ಘಟನೆಗಳ ಪುನರಾವರ್ತನೆಗೆ ಅವಕಾಶ ನೀಡದಿರಲಿ.

—**ಎಂ.ನಾರಾಯಣ, ಕೊಪ್ಪ.**

"ಒಳ್ಳೆಯವರಿಗೆ ಆಪತ್ತು"

ಮಾನ್ಯರೆ,

ನಿಮ್ಮ 23.2.86ರ ವಾರಪತ್ರಿಕೆಯಲ್ಲಿ ನಿಮ್ಮ ಮೇಲೆ ಹಲ್ಲೆ ಎಸಗಿದ ಆಘೋ ಡ್ರೈವರ್ ಮೋಸವನ್ನು ತಿಳಿದು ತುಂಬಾ ಬೇಸರವಾಯಿತು. ಆದರೆ ತಕ್ಷಣ ಪತ್ರ ಬರೆಯಲಾಗಲಿಲ್ಲ. ಕಾರಣ, ಮಕ್ಕಳಿಗೆ ಪರೀಕ್ಷೆಯಿತ್ತು. ನಮ್ಮ ಹಳ್ಳಿಯಲ್ಲಿ ಸಹ ಎಲ್ಲರೂ ಈ ವಿಷಯ ತಿಳಿದು ಬಹಳ ಬೇಜಾರು ಪಟ್ಟರು.

ಒಳ್ಳೆಯವರಿಗೆ ಇಂಥ ಆಪತ್ತು ಒದಗಬಾರದು. ಆದ್ದರಿಂದ ಸ್ವಲ್ಪ ಎಚ್ಚರಿಕೆಯಿಂದ ಇರಿ ಎಂದು ಕೇಳಿಕೊಳ್ಳುತ್ತೇನೆ.

—**ಶ್ರೀಮತಿ ಭದ್ರಮ್ಮ,**
ಸಣ್ಣ ಕೌಳಿ, ಜಯಪುರ.

(ಒಬ್ಬ ದಲಿತ ಕೃಷಿ ಕಾರ್ಮಿಕಳು. ಅನಕ್ಷರಸ್ಥೆ. ಕಷ್ಟದಿಂದ ತನ್ನ ಮಗ ಮತ್ತು ಮಗಳನ್ನು ಎಸ್ಸೆಸ್ಸೆಲ್ಸಿ ಓದಿಸುತ್ತಿರುವ ಪ್ರಜ್ಞಾವಂತೆ. —ಸಂ.)

ಎಲೆ ಮರೆಯ ಕಾಯಿಯಂಥ ಯಕ್ಷಗಾನ ಕಲಾವಿದ

ರಾಮಚಂದ್ರ ರಾವ್



ಹರಿಹರಪುರದಲ್ಲಿ 'ಮಲೆನಾಡು ಯಕ್ಷಗಾನ ಕಲಾ ಶಿಕ್ಷಣ ಕೇಂದ್ರ (ರಿ.)' ಎಂಬ ಸಂಸ್ಥೆಯೊಂದು ಈಗ್ಗೆ 3 ವರ್ಷಗಳಿಂದ ಕೆಲಸ ಮಾಡುತ್ತಿದೆ. ಹರಿಹರಪುರ ಮಠಾಧೀಶರು ಮಹಾ ಪೋಷಕರಾಗಿರುವ ಈ ಸಂಸ್ಥೆ ಮಲೆನಾಡಿನ ಈ ಭಾಗದ ಹಳ್ಳಿಗಾಡಿನ ಯಕ್ಷಗಾನ ಕಲಾಸಕ್ತರಿಗೆ, ಮುಖ್ಯವಾಗಿ ಯುವಕರಿಗೆ ವಿಧಿವತ್ತಾಗಿ ತರಬೇತಿ ನೀಡುತ್ತಿದೆ. ಹಾಗೆಯೇ ಈ ಭಾಗದ ಹಲಕೆಲವು ಎಲೆಮರೆಯ ಯಕ್ಷಗಾನ ಕಲಾವಿದರಿಗೆ ಆಗೀಗ ತಮ್ಮ ಪ್ರತಿಭೆ ತೋರ್ಪಡಿಸಲು, ಅದು ತನ್ನೊಳಗೇ ಕಮರಿ ಹೋಗದಂತೆ ಜೀವಂತವಾಗಿಡಲು ಒಂದು ಸಣ್ಣ ವೇದಿಕೆಯೂ ಆಗಿದೆ.

ಈ ಕೇಂದ್ರದ ಸ್ಥಾಪನೆಗೆ ಈ ಭಾಗದ ಹಲವು ಯಕ್ಷಗಾನ ಪ್ರೇಮಿಗಳು, ಕಲಾವಿದರು ಶ್ರಮಿಸಿದ್ದಾರೆ. ಅವರಲ್ಲೊಬ್ಬ ಪ್ರಮುಖರು ಅದರ ಅಧ್ಯಕ್ಷರಾಗಿರುವ ಎಂ.ಎಲ್. ರಾಮಚಂದ್ರರಾವ್.

ಕೃಷಿ-ವೃತ್ತಿ, ಯಕ್ಷಗಾನ ಆಸಕ್ತಿ

ವೃತ್ತಿಯಲ್ಲಿ ಕೃಷಿಕರಾದ 46 ವರ್ಷ ವಯಸ್ಸಿನ ರಾಮಚಂದ್ರರಾವ್ ಚಿಕ್ಕಂದಿನಲ್ಲೇ ಯಕ್ಷಗಾನದಲ್ಲಿ ಆಸಕ್ತಿ ಬೆಳೆಸಿಕೊಂಡು, ಸ್ವತಃ ಒಬ್ಬ ಯಕ್ಷಗಾನ ಕಲಾವಿದರಾಗಿದ್ದ ತಂದೆ ಶ್ರೀ ಅಂಬಲೂರು ಲಕ್ಷ್ಮೀನಾರಾಯಣಯ್ಯನವರಿಂದ ಭಾಗವತಿಕೆಯಲ್ಲಿ ಆರಂಭಿಕ ಶಿಕ್ಷಣ ಪಡೆದರು. ಅನಂತರ ನಾಲ್ಕು ವರ್ಷ ಮೂಡಿಗೆರೆಯಲ್ಲಿ ನೆಲಸಿದ್ದಾಗ ರಾತ್ರಿ ಅಲ್ಲಿನ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಿಂದ ಕನ್ನಡದಲ್ಲಿ ಹೆಚ್ಚಿನ ಅಧ್ಯಯನ ಪಡೆದರು. ಜೊತೆಗೆ ಆಳ ಅಧ್ಯಯನದಿಂದ ತಮ್ಮ ಯಕ್ಷಗಾನ ಪ್ರೌಢಿಮೆಯನ್ನು ಬೆಳೆಸಿಕೊಂಡರು.

ಮಂಡಳಿ, ಮೇಳ

ಅನಂತರ ಕೊಪ್ಪದ ಗುಣವಂತಿಯಲ್ಲಿ ನೆಲೆಸಿ, ಶ್ರೀರಾಮ ಸೇವಾ ಯಕ್ಷಗಾನ ಕಲಾ ಮಂಡಳಿಯನ್ನು ಸ್ಥಾಪಿಸಿ, ನ.ರಾ. ಪುರ ಶಿವಮೊಗ್ಗ, ತೀರ್ಥಹಳ್ಳಿ, ಮೂಡಿಗೆರೆ, ಶೃಂಗೇರಿ ಮುಂತಾದೆಡೆ ತಾಳಮದ್ದಲೆ ಕಾರ್ಯಕ್ರಮಗಳನ್ನು ಕೊಡುತ್ತಾ ನಂತರ ಕಿಗ್ಗಾ ಋಷ್ಯ ಶೃಂಗೇಶ್ವರ ಸ್ವಾಮಿ ಯಕ್ಷಗಾನ ಮೇಳವನ್ನು ಸ್ಥಾಪಿಸಿದರು. ಇದರಲ್ಲಿ ಪ್ರಧಾನ ಪಾತ್ರಗಳನ್ನು ತಾವೇ ನಿರ್ವಹಿಸುತ್ತಾ ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣ-ಉತ್ತರ ಕನ್ನಡ ಜಿಲ್ಲೆಗಳಲ್ಲಿ 300ಕ್ಕೂ ಹೆಚ್ಚು ಪ್ರದರ್ಶನ ನೀಡಿದ್ದಲ್ಲದೆ, ಕೆಲವು ಖ್ಯಾತ ಮೇಳಗಳಲ್ಲಿ ಅತಿಥಿ ಕಲಾವಿದನಾಗಿಯೂ ಭಾಗವಹಿಸಿದರು.

ಹರಿಹರಪುರದಲ್ಲಿ ಯಕ್ಷಗಾನ ಶಿಕ್ಷಣ ಕೇಂದ್ರದ ಸ್ಥಾಪನೆಮಾಡಿ ನಂತರ ತಮ್ಮಲ್ಲಿದ್ದ ಸುಮಾರು ಒಂದು ಸಾವಿರ ರೂ.ಗೂ ಹೆಚ್ಚು ಬೆಲೆ ಬಾಳುವ ಹಿಮ್ಮೇಳದ ಸಾಹಿತ್ಯವನ್ನು ಕೇಂದ್ರಕ್ಕೆ ನೀಡಿದ್ದಾರೆ. ಹರಿಹರಪುರ ವಾಸಿ ಖ್ಯಾತ ಗಮಕ ವಿದ್ವಾನ್ ಎನ್.ವಿ. ಕೃಷ್ಣದೇವರಯ್ಯನವರ ಕಾವ್ಯ ವಾಚನಕ್ಕೆ ವ್ಯಾಖ್ಯಾನವನ್ನು ನೀಡುತ್ತಿರುವ ಇವರು, ತಮ್ಮ ಈ ಎಲ್ಲಾ ಕಲಾಸೇವೆ, ಸಾಧನೆಗಳಿಗಾಗಿ ಸಾರ್ವಜನಿಕರಿಂದ ಹಲವು

(ಮೂರನೇ ಪುಟಕ್ಕೆ)

ಗೋವಿಂದ ಗೌಡರು ತಮ್ಮ ತೌರೆಂದು ಭಾವಿಸಿದ್ದ

ಬೊಮ್ಲಾಪುರದ ಸಮಸ್ಯೆಗಳು-ಅವರನೆನಪಿಗೆ

ಮಾನ್ಯರೆ,

ಮೊನ್ನೆ ಶೃಂಗೇರಿಯಲ್ಲಿ ನಡೆದ 'ಜನವಾಣಿ' ಕಾರ್ಯಕ್ರಮಕ್ಕಾಗಿ ನಾನು ನಮ್ಮೂರಿನ ಅತಿ ಪ್ರಮುಖವಾದ ಕೆಲವು ಸಮಸ್ಯೆಗಳನ್ನು ಕುರಿತಂತೆ ಈ ಕೆಳಗಿನ ಪ್ರಶ್ನೆಗಳನ್ನು ಕಳಿಸಿದ್ದೆ. ಆದರೆ ಅವಾವುವೂ ಅಲ್ಲಿ ಪ್ರಸ್ತಾಪಿತವಾಗದೆ ವಯಸ್ಕರ ಶಿಕ್ಷಣದ ಬಗ್ಗೆ ಕಳಿಸಿದ್ದ ಒಂದು ಪ್ರಶ್ನೆಗೆ ಮಾತ್ರ ಅವಕಾಶ ಕೊಟ್ಟಿದ್ದರು.

ಈ ಸಮಸ್ಯೆಗಳು ಅಲ್ಲಿ ಪ್ರಸ್ತಾಪವಾಗದಿದ್ದರೂ ಅಡ್ಡಿಯಿಲ್ಲ, ಈ ಬಗ್ಗೆ ಈಗಲಾದರೂ ಮಂತ್ರಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ, ಅವನ್ನು ಪರಿಹರಿಸಲೆಂದು ಕೋರುತ್ತೇನೆ.

1. ಹೊಕ್ಕಳಿಕೆ ಮತ್ತು ಬೊಮ್ಲಾಪುರದ ಮಧ್ಯೆ ಬಚ್ಚಣಿಕೆ ಹಳ್ಳಕ್ಕೆ ಸೇತುವೆ ಇನ್ನೂ ಆಗಿಲ್ಲ. ಗೋವಿಂದ ಗೌಡರು ಸತತವಾಗಿ ಸುಮಾರು 35–40 ವರ್ಷ ತಾ|| ಬೋರ್ಡಿಗೆ ಚುನಾಯಿತರಾದ ಕೊಪ್ಪ ಕಸಬಾ ಕ್ಷೇತ್ರಕ್ಕೆ ಈ ಗ್ರಾಮವೂ ಸೇರಿದ್ದು, "ಇದು ನನ್ನ ತೌರು ಇದ್ದಂತೆ. ಈ ಗ್ರಾಮದ ಪ್ರತೀ ಮೂಲೆಯಲ್ಲೂ ಏನೇನು ಕೆಲಸ ಆಗಬೇಕೆಂದು ನನಗೆ ಗೊತ್ತಿದೆ" ಎನ್ನುತ್ತಿದ್ದರು. ಇನ್ನಾದರೂ ಅವರ ತೌರಿನ ಈ ಪ್ರಮುಖ ಸಂಪರ್ಕ ಕೊಂಡಿ ಇನ್ನೂ ಕೂಡದೆ ಇರುವುದು ಅವರಿಗೆ ಜ್ಞಾಪಕವಾಗಲಿ.

2. ಮಾಜಿ ಗೇಣಿದಾರ ರೈತರ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಸಾಲ ಮನ್ನಾ ಮಾಡುವ ಸುಗ್ರೀವಾಜ್ಞೆ ಹೊರಡಿಸಿದ್ದಾಗ್ಯೂ ಇನ್ನೂ ಏಕೆ ಮನ್ನಾ ಮಾಡಿಲ್ಲ? ಬಡ ರೈತರು ನಿರೀಕ್ಷೆಯಿಂದ ಸಾಲ ತುಂಬದೆ ವಿನಾ ಕಾರಣ ಸುಸ್ತಿದಾರರಾಗುವಂತಾಗಿದೆ. ಈ ಸಂದರ್ಭದಲ್ಲಿ, ನಮ್ಮೂರ ರೈತರೊಬ್ಬರು ಕಟ್ಟಿದ ಕಂತಿನ ಹಣವನ್ನು ವಾಪಾಸು ಕೊಡಿಸುವ ಬಗ್ಗೆ ಕಳೆದ ವರ್ಷ ಗೌಡರು ಮಾಡಿದ್ದ ಶಪಥವೊಂದು ಅವರಿಗೆ ನೆನಪಿದೆಯೆಂದು ನಂಬಿದ್ದೇನೆ.

3. ಬೊಮ್ಲಾಪುರ ಗ್ರಾಮವನ್ನು ತಾಲ್ಲೂಕಿನ ಅಭಿವೃದ್ಧಿ ಇಲಾಖೆಯವರು ದತ್ತು ತೆಗೆದುಕೊಂಡಿದ್ದರು. ಆ ವರ್ಷ ಮತ್ತು ಅನಂತರ ಅದರಿಂದಾಗಿ ಸಾಧಿಸಿದ ಪ್ರಗತಿ ಏನು?

ಕೆ.ಎ.ಶಂಕರಪ್ಪ,
ಕಾರಬೈಲು, ಬೊಮ್ಲಾಪುರ.

"ಕಾನೂನು ನೆರವಿನಿಂದ ಸಾಮಾಜಿಕ ಸಮಸ್ಯೆಗಳು ಬಗೆಹರಿಯಲಿ"

ಹರಿಹರಪುರ: "ಸಮಾಜದಲ್ಲಿ ಅಶಕ್ತರು, ದುರ್ಬಲರು ಇರುವುದರಿಂದ ಸಮಸ್ಯೆಗಳು ಹೆಚ್ಚುತ್ತಿವೆ. ವಿದ್ಯೆಯ ಕೊರತೆ, ಬಡತನದಿಂದ ತಮ್ಮ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ಜನತೆಗೆ ಕಾನೂನಿನ ತಿಳುವಳಿಕೆ, ಸಹಾಯ ಅಗತ್ಯ. ಇಂದು ಕಾನೂನಿನ ನೆರವನ್ನು ಗ್ರಾಮಗಳಲ್ಲಿ ಬಂದು ನೀಡುತ್ತಿರುವುದು ಮೆಚ್ಚುವ ಕೆಲಸ" ಎಂದು ಇಲ್ಲಿ ಮಾ. 2ರಂದು ನಡೆದ ಉಚಿತ ಕಾನೂನು ನೆರವು ಶಿಬಿರದ ಅಧ್ಯಕ್ಷತೆ ವಹಿಸಿದ್ದ ಹರಿಹರಪುರ ಮಠಾಧೀಶರು ನುಡಿದರು.

ಶಿಬಿರದ ಉದ್ಘಾಟನೆ ಮಾಡಿದ ನರಸಿಂಹರಾಜಪುರ ಪುರಸಭಾಧ್ಯಕ್ಷರಾದ ಮಾಗ ಚಂದ್ರಶೇಖರ್, ಎಲ್ಲಾ ತಾಲ್ಲೂಕಿನಲ್ಲೂ ಕಾನೂನು ನೆರವು ಸಮಿತಿ ಏರ್ಪಾಡಾಗಿದ್ದು, ಎಲ್ಲರೂ ಶ್ರದ್ಧೆಯಿಂದ ಈ ಸೌಲಭ್ಯಗಳನ್ನು ಪಡೆಯಬೇಕೆಂದು ಕರೆಯಿತ್ತರು.

ನರಸಿಂಹರಾಜಪುರ ಕಾನೂನು ನೆರವು ಸಮಿತಿ ಏರ್ಪಡಿಸಿದ್ದ ಈ ಶಿಬಿರದಲ್ಲಿ ಭಾಗವಹಿಸಿದ್ದ ಜನರಿಗೆ ವಕೀಲರುಗಳಾದ ವೈ.ಎಂ. ಸೂರ್ಯನಾರಾಯಣರಾವ್, ಹೆಚ್.ಎಸ್ ರಾಮರಾವ್, ಪಿ.ಸಿ.ಜೇಸನ್ ಮತ್ತು ಸೀತೂರು ಚಂದ್ರಶೇಖರ ರಾವ್ ಅವರುಗಳು ಸಮಸ್ಯೆಗಳನ್ನು ಪರಿಶೀಲಿಸಿ ಸ್ಥಳದಲ್ಲೇ ಪರಿಹಾರ ಮತ್ತು ಸಲಹೆ ನೀಡಿದರು.

ಪ್ರಾರಂಭದಲ್ಲಿ ಸಮಿತಿಯ ಕಾರ್ಯದರ್ಶಿ ಪಿ.ಆರ್. ಶ್ರೀನಿವಾಸಮೂರ್ತಿ ಸ್ವಾಗತಿಸಿದರು.

ನಮ್ಮ 2.3.86ರ ಸಂಚಿಕೆಯಲ್ಲಿ ಪ್ರಕಟಿಸಿದ್ದಂತೆ "ಸ್ನೇಹಕುಂಜದ ಕುಸುಮಕ್ಕ"ನವರ ವಿಳಾಸ ಇಲ್ಲಿದೆ:

ಡಾ|| ಕುಸುಮಾ ಬಿ. ಸೊರಬ್,
M.S.M.B. (Bom.), R.N.R.M.,
ವಿವೇಕಾನಂದ ಆರೋಗ್ಯ ಧಾಮ,
ಕಾಸರಕೋಡು
ಹೊನ್ನಾವರ ತಾ||
ಉತ್ತರ ಕನ್ನಡ ಜಿಲ್ಲೆ

ಬೇಗಾರು ಆ|| ಕೇಂದ್ರ: ಗುರಿ ಮೀರಿ ಸಾಧನೆ

ಶೃಂಗೇರಿ: ಬೇಗಾರು ಪ್ರಾಥಮಿಕ ಆರೋಗ್ಯ ಕೇಂದ್ರದ ಅಡಿಯಲ್ಲಿ ಫೆ. 26ರಂದು ಇಲ್ಲಿ ಉದರ ದರ್ಶಕ ಸಂತಾನ ಹರಣ ಶಸ್ತ್ರ ಚಿಕಿತ್ಸಾ ಶಿಬಿರ ನಡೆಯಿತು. ಚಿಕಿತ್ಸೆಗೊಳಗಾದವರಿಗೆ ಸರ್ಕಾರದ ಕೊಡುಗೆಗಳಲ್ಲದೆ, ಇಲ್ಲಿನ ವರ್ತಕರ ಸಂಘ ಮತ್ತು ಭೂ. ಅ. ಬ್ಯಾಂಕ್‌ಗಳು ಒಟ್ಟಾಗಿ ತಲಾ ಒಂದೊಂದು ಸ್ಟೀಲ್ ತಟ್ಟೆ, ಅರಣ್ಯ ಇಲಾಖೆಯಿಂದ ತಲಾ ಒಂದು ಸೀರೆ, ಮತ್ತು ತಾ. ಅ. ಮಂಡಳಿಯ ಶೇ. 18ರ ನಿಧಿಯಿಂದ ಹಿಂದುಳಿದವರಿಗೆ ತಲಾ 2 ಸೀರೆ – ಇವಿಷ್ಟನ್ನು ಕೊಡಲಾಯಿತು.

ಈ ಶಿಬಿರದೊಂದಿಗೆ ಬೇಗಾರು ಕೇಂದ್ರ ಮಾರ್ಚ್ ಕೊನೆಯವರೆಗೆ ತನಗೆ ನಿಗದಿ ಮಾಡಲಾಗಿದ್ದ 287 ರ ಗುರಿಯನ್ನು ಮೀರಿದಂತಾಗಿದೆ (ಸಾಧನೆ–291.) ಅತಿ ಹೆಚ್ಚು ವೈಯಕ್ತಿಕ ಸಾಧನೆ ಕೆ. ಜಿ. ಪದ್ಮಾವತಿ ಅವರದು (37 ಪ್ರಕರಣ) ಇನ್ನೊಂದು ತಿಂಗಳಿಗೆ ಇನ್ನೂ 25ರ ಗುರಿ ಇರಿಸಿಕೊಳ್ಳಲಾಗಿದೆ. (ನೆರೆಯ ಕೊಪ್ಪ ಪ್ರಾ. ಆ. ಕೇಂದ್ರವನ್ನೂ ಮೀರಿದೆ.)

ಈ ಶಿಬಿರದಲ್ಲಿ ತಾ|| ತಹಸೀಲ್ದಾರ್ ಮತ್ತು ಅವರ ಸಿಬ್ಬಂದಿ ಬಹಳ ಮುತುವರ್ಜಿ ವಹಿಸಿ ನೆರವಾದರೆಂದು ತಿಳಿದುಬಂದಿದೆ.

ಭೂಮಿ ಪೂಜೆ ಸಮಾರಂಭ

(ವರದಿ: ಚಾವಲ್ಮನೆ ಸುರೇಶ್ ನಾಯಕ್)

ಹಾಲ್ಮುತ್ತೂರು: ಇಲ್ಲಿ ಮಾ. 3ರಂದು ಸಂಜೆ ಚಾವಲ್ಮನೆ, ಹಾಲ್ಮುತ್ತೂರು ಹಾಗೂ ಹೊಸೂರು ಗ್ರಾಮಗಳಲ್ಲಿನ ಗೊಬ್ಬರ ಅನಿಲ ಯಂತ್ರಗಳ ರಚನೆಗೆ ಭೂಮಿ ಪೂಜಾ ಸಮಾರಂಭವನ್ನು ಕೊಪ್ಪ ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷರಾದ ಕೆ. ಕೃಷ್ಣಪ್ಪ ಗೌಡರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಕೊಪ್ಪ ಸಹಾಯಕ ಕೃಷಿ ನಿರ್ದೇಶಕರಾದ ಎಂ. ಎಸ್. ಸುಬ್ಬಯ್ಯ ಗೌಡ, ಕೊಪ್ಪ ಕ್ಷೇತ್ರಾಭಿವೃದ್ಧಿ ಅಧಿಕಾರಿ ಪಿ. ಬಾಲಪ್ಪ ಹಾಗೂ ಕೊಪ್ಪ ತಹಸೀಲ್ದಾರ್ ಎಸ್. ಕರೀಗೌಡ ಇವರುಗಳು ಮಾತನಾಡಿದರು.

ಬರ ಪರಿಹಾರ ನಿಧಿಗೆ ದೇಣಿಗೆ

ಕೊಪ್ಪ ಕಿರಿಯ ಕಾಲೇಜು ವಿದ್ಯಾರ್ಥಿ ಸಂಘದ ಕಾಲೇಜು ಸ್ವಚ್ಛತಾ ಯೋಜನೆಯಿಂದ ಮತ್ತು ಸಂಘದಲ್ಲಿ ಉಳಿತಾಯದ ಹಣ ಒಟ್ಟು ಸೇರಿಸಿ 1000 ರೂ. ಗಳನ್ನು ಮುಖ್ಯ ಮಂತ್ರಿಗಳ ಬರ ಪರಿಹಾರ ನಿಧಿಗೆ ಕಳಿಸಲಾಗಿದೆ.

ಕುದುರೆಮುಖದ ಜೇಸೀಸ್ ಸಂಸ್ಥೆ ಸಾರ್ವಜನಿಕರಿಂದ ಮನೆಗೊಂದು ಕಿಲೋ ದಂತೆ ಸಂಗ್ರಹಿಸಿದ ಏಳೂವರೆ ಕ್ವಿಂಟಾಲ್ ಅಕ್ಕಿಯನ್ನು ಸೂಕ್ತ ವಿತರಣೆಗಾಗಿ ಆರೆಸ್ಸೆಸ್ ಸಂಚಾಲಿತ ಬರಪರಿಹಾರ ಸಮಿತಿಗೆ ಪೇಜಾವರ ಮಠಾಧೀಶರ ಮೂಲಕ ನೀಡಿದೆ.

ಮುಖ್ಯಮಂತ್ರಿಗಳ ಬರ ಪರಿಹಾರ ನಿಧಿಗೆ ದೇಣಿಗೆ ನೀಡುವುದಕ್ಕಾಗಿ ತೆಗೆದುಕೊಳ್ಳುವ ಬ್ಯಾಂಕ್ ಡ್ರಾಫ್ಟ್‌ಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ ಎಲ್ಲಾ ಶಾಖೆಗಳಲ್ಲಿ ಕಮಿಶನ್ ರಹಿತವಾಗಿ ನೀಡಲಾಗುವುದೆಂದು ಕೊಪ್ಪ ಶಾಖೆ ಮ್ಯಾನೇಜರ್ ವೆಂಕಟಾಚಲ ಅಯ್ಯಂಗಾರ್ ತಿಳಿಸಿದ್ದಾರೆ.

ಕೊಪ್ಪ ತಾ|| ಜನತಾ ಪಕ್ಷದ ಅಧ್ಯಕ್ಷರಾಗಿ ಆನಂದರಾಮ ಭಟ್

ಕೊಪ್ಪ: ಎನ್. ವಿ. ಆನಂದ ರಾಮ ಭಟ್ಟರು ತಾ|| ಜನತಾ ಪಕ್ಷದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಮಾ. 2ರಂದು ಕ್ಷೇತ್ರ ಸಮಿತಿ ಅಧ್ಯಕ್ಷ ಮೂಗ ಚಂದ್ರಶೇಖರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅವಿರೋಧವಾಗಿ ಆಯ್ಕೆಯಾದ ಇನ್ನಿತರ ಪದಾಧಿಕಾರಿಗಳೆಂದರೆ: ಕುಸುರಿಗೆ ಕೃಷ್ಣಪ್ಪ ಗೌಡ, ಕೋಗ್ರೆ ಚಂದ್ರಶೇಖರ್ (ಉಪಾಧ್ಯಕ್ಷರು), ಹೆಚ್. ಎಸ್. ಕಳಸಪ್ಪ (ಕಾರ್ಯದರ್ಶಿ), ಹೆಚ್. ಎಸ್. ಮಂಜುನಾಥ್, ಹರಿಹರಪುರ (ಸಂಘಟನಾ ಕಾರ್ಯದರ್ಶಿ) ಮತ್ತು 20 ಜನ ಸದಸ್ಯರು.

ಸಂತಾಪಸೂಚಕ ಸಭೆ

ಕೊಪ್ಪ: ಇಲ್ಲಿನ ಕಿರಿಯ ಕಾಲೇಜಿನಲ್ಲಿ ಎರಡನೇ ದರ್ಜೆ ಗುಮಾಸ್ತರಾಗಿದ್ದ ಕೆ. ಜೆ. ಮಹಮದ್ ಇಸ್ಮಾಯಿಲ್ ಅವರು ಮಾ. 2ರಂದು ಆತ್ಮಹತ್ಯೆಯಿಂದ ಅಕಾಲ ಮರಣಕ್ಕೀಡಾಗಿದ್ದು, ಕಾಲೇಜು ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಮಾ. 4ರಂದು ಕಾಲೇಜಿನಲ್ಲಿ ಸಂತಾಪ ಸೂಚಕ ಸಭೆ ನಡೆದು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಲಾಯ್ತು.

ಸ್ಕೌಟ್ಸ್/ಗೈಡ್ಸ್ ಮೇಳ

ಶೃಂಗೇರಿ: ಇಲ್ಲಿ ಮಾ. 1ರಂದು ತಾ|| ಮಟ್ಟದ ಸ್ಕೌಟ್ಸ್/ಗೈಡ್ಸ್ ಮೇಳವು ಸಂಸ್ಥೆಯ ಸಹಾಯಕ ಜಿಲ್ಲಾ ಕಮಿಶನರ್‌ರಾದ ಸ|| ಶಿಕ್ಷಣಾಧಿಕಾರಿ ಕೆ.ಎನ್. ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಮೈಸೂರು ಬ್ಯಾಂಕ್ ಮ್ಯಾನೇಜರ್ ಡಿ. ಸೀತಾರಾಮ ಭಟ್ ಮೇಳ ಉದ್ಘಾಟಿಸಿದರು. ಸ್ಕೌಟ್ಸ್/ಗೈಡ್ಸ್‌ಗಳಿಗಾಗಿ ಮಾಡೆಲ್ ರಚನೆ, ಚಿತ್ರ, ರಂಗೋಲಿ ಸ್ಪರ್ಧೆಗಳು ನಡೆದವು. ಸಂಜೆ ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಎಸ್. ಜಯಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಮುಕ್ತಾಯ ಸಮಾರಂಭದಲ್ಲಿ ಬಾಲಿಕಾ ಪ್ರೌಢಶಾಲೆಯ ಅಧ್ಯಾಪಕ ವೆಂಕಟೇಶ್ ಸ್ಕೌಟ್ / ಗೈಡ್‌ಗಳಿಗೆ ಪ್ರಶಸ್ತಿ ಪತ್ರ ವಿತರಿಸಿದರು. ಪೇಟೆಯ ಎಲ್ಲಾ ಶಾಲೆಗಳ ಮಕ್ಕಳು ಮತ್ತು ಸ್ಕೌಟ್ / ಗೈಡ್‌ಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಶಿವಮೊಗ್ಗ ಅಡಿಕೆ ಪೇಟೆ

ತಾರೀಖು: 7.3.1986

ಸರಕು: 2890 – 3050
ಬೆಟ್ಟೆ: 1800 – 2100
ಗೊರಬಲು: 1330 – 1740

700 ಕೃಷಿ ಸಹಾಯಕರ ಹುದ್ದೆಗಳಿಗೆ ಅರ್ಜಿ ಆಹ್ವಾನ

ಕರ್ನಾಟಕ ರಾಜ್ಯಾದ್ಯಂತ 700 ಕೃಷಿ ಸಹಾಯಕರುಗಳ ಹುದ್ದೆಗಳನ್ನು ಭರ್ತಿ ಮಾಡಲು ಇಲಾಖೆ ನೇಮಕಾತಿ ಸಮಿತಿಯು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆದಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 30–3–86. ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗೆ ಇಲಾಖಾ ನೇಮಕಾತಿ ಸಮಿತಿಯು ನೀಡಿದ ದಿನಾಂಕ 3–3–86ರ ಆಂಗ್ಲ ಜಾಹೀರಾತು/18–3–86ರ ಕರ್ನಾಟಕ ರಾಜ್ಯ ಪತ್ರದಲ್ಲಿ (ಭಾಗ–8, ಪುಟ 11ರಿಂದ 12) ನೋಡಬಹುದು. ಹೆಚ್ಚಿನ ವಿವರಗಳಿಗೆ ಚಿಕ್ಕಮಗಳೂರು ಪ್ರಧಾನ ಕೃಷಿ ಅಧಿಕಾರಿಗಳ ಕಛೇರಿಯನ್ನು ಸಂಪರ್ಕಿಸಬಹುದು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀಪಟಿಗೆ ಅಚ್ಚುಕೂಟ, ಕೊಪ್ಪ